ಡಿಜಿಟಲ್ ವ್ಯವಹಾರವೇ ನಡೆಯುತ್ತದೆ. ಪರದೆ ಮೇಲೆ ನೋಡಿದ್ದನ್ನು ಖರೀದಿಸುತ್ತೇವೆ. ಹಣ ಕೊಟ್ಟ ಭಾವವೇ ನಮಗೆ ಉಳಿಯುವುದಿಲ್ಲ. ಕ್ರೆಡಿಟ್ ಕಾರ್ಡ್ ಬಿಲ್ ಬಂದಾಗಲೇ ಅದರ ಅರಿವು. ಬಿಲ್ ಡ್ಯೂ ಆದಾಗ ಕಳವಳ.

ಮನಃಶಾಸ್ತ್ರಜ್ಞ ಫ್ಲೋರೆಂಟ್ ಒಸ್ಮಾನಿ ಸಹ ಮೇಲಿನ ಅಂಶವನ್ನೇ ಹೇಳುತ್ತಾರೆ. 'ಆನ್‌ಲೈನ್‌ನಲ್ಲಿ ಖರೀದಿಸುವಾಗ ಹಣಕ್ಕಿಂತಲೂ ಮನಸ್ಸಿನ ತೀರ್ಮಾನವೇ ಪ್ರಾಮುಖ್ಯ ಪಡೆಯುತ್ತದೆ. ವ್ಯಕ್ತಿಗೆ ಒಂದು ವಸ್ತುವನ್ನು ಆನ್‌ಲೈನ್‌ನಲ್ಲಿ ಖರೀದಿಸುವಾಗ ಹತ್ತಾರು ಆಯ್ಕೆಗಳಿರುತ್ತವೆ. ಬಹಳ ಕಡಿಮೆ ದರಕ್ಕೆ ಅಥವಾ ದೊಡ್ಡ ರಿಯಾಯಿತಿಗೆ ಒಂದು ವಸ್ತುವನ್ನು ಖರೀದಿಸುತ್ತಿದ್ದೇನೆ ಎನ್ನುವ ಭಾವನೆಯನ್ನು ಮಾರಾಟಗಾರರು ಬಿತ್ತುತ್ತಾರೆ. ಕ್ರೆಡಿಟ್ ಕಾರ್ಡ್ ಅಥವಾ ಆನ್‌ಲೈನ್ ಪೇಮೆಂಟ್‌ಗಳು ವರ್ತಮಾನದ ಅಗತ್ಯವನ್ನು ತೀರಿಸುತ್ತವೆ. ಇನ್ನೂ ಕೆಲವರಿಗೆ ಕೆಲವು ಉತ್ಪನ್ನಗಳನ್ನು ಖರೀದಿಸುವುದು ಪ್ರತಿಷ್ಠೆಯ ವಿಷಯ. ಹೀಗಾಗಿ, ಆನ್‌ಲೈನ್‌ನಲ್ಲಿ ಕಣ್ಣಿಗೆ ಬಿದ್ದ ತಕ್ಷಣ ಹಿಂದೆಮುಂದೆ ನೋಡದೆ ಆರ್ಡರ್ ಮಾಡಿಯೇ ಬಿಡುತ್ತಾರೆ' ಎನ್ನುವುದು ಫ್ಲೋರೆಂಟ್ ಅಭಿಪ್ರಾಯ.



## ಮಾಡರ್ನ್ ವಿಶ್ವಾಮಿತ್ರರಿಗೆ ಅನುಕ್ಷಣವೂ ಪರೀಕ್ಷೆ!

ವಿಶ್ವಾಮಿತ್ರನ ತಪಸ್ಸು ಕೆಡಿಸಲು ಅಪ್ಸರೆಯರಾದ ರಂಭಾ, ಊರ್ವಶಿ, ತಿಲೋತ್ತಮೆಯರೆಲ್ಲ ಸೋತು ಸುಣ್ಣವಾದಾಗ ಮೇನಕೆಯ ಆಗಮನವಾಗುತ್ತದೆ. ಋಷಿಯ ಮನಸ್ಸು–ತಪಸ್ಸು ಕೆಡಿಸಿ ಬಂದ ಕೆಲಸವಾದ ಮೇಲೆ ಮೇನಕೆ ಕಣ್ಮರೆ. ಇದನ್ನು ಇಂದಿನ ಇ–ಜಗತ್ತಿಗೆ ಅನ್ವಯಿಸುವುದಾದರೆ, ಗ್ರಾಹಕರೆಂಬ ವಿಶ್ವಾಮಿತ್ರರ ತಪಸ್ಸನ್ನು 'ಆನ್‌ಲೈನ್ ಶಾಪಿಂಗ್' ಎನ್ನುವ ಮೇನಕೆ ಭಂಗಪಡಿಸಿದ್ದಾಳೆ.

### ಶಾಪಿಂಗ್ ಟಿಪ್ಸ್

ಆಫರ್‌ಗಳು, ಹೆಚ್ಚಿನ ರಿಯಾಯಿತಿ ನೀಡುವುದಾಗಿ ನಿಮಗೆ ಬರುವ ಎಸ್‌ಎಂಎಸ್ ಅಥವಾ ಇ-ಮೇಲ್‌ಗಳನ್ನು ನಂಬಬೇಡಿ. ನಿಮ್ಮ ಮಾಹಿತಿ ಕದಿಯುವ ಫಿಶಿಂಗ್ ಮೇಲ್‌ಗಳ ಬಗ್ಗೆ ಎಚ್ಚರ ಇರಲಿ.

ಶಾಪಿಂಗ್@ಚಟ

